





ಜನಾರ್ದನ ರಾವ್





ಕಾವಿ ಕಲೆಗೆ ಕಾಯಕಲ್ಪ ನೀಡುತ್ತಿರುವ ಕಲಾವಿದ ಜನಾರ್ದನ ರಾವ್ ಕಳೆದ 22 ವರ್ಷಗಳಿಂದ ಈ ಕಲೆಯ ಪುನರುಜ್ಜೀವನ ಕಾರ್ಯದಲ್ಲಿ ನಿರತರಾಗಿರುವವರು. ಕಾವಿ ಕಲೆಯ ಮೇಲಿನ ಅಧ್ಯಯನಕ್ಕೆ ಮಣಿಪಾಲ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪಡೆದಿರುವ ಹಾವಂಜೆಯವರು, ತೆಲಂಗಾಣದ ಕ್ರಾಫ್ಟ್ ಕೌನ್ಸಿಲ್ ನೀಡಿರುವ 'ರಾಷ್ಟ್ರೀಯ ಪುರಸ್ಕಾರ', ಪ್ರಜಾವಾಣಿಯ 'ಯುವ ಸಾಧಕ' ಪ್ರಶಸ್ತಿ, ಮೂಡುಬಿದ್ರೆಯ ಜೈನಮಠದಿಂದ 'ಚಿತ್ರಾದೇವಿ ಪುರಸ್ಕಾರ', ಮೈಸೂರು ಕಲಾಪ್ರದರ್ಶನದ ಮೆರಿಟ್ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡವರು.

ಮಂಗಳೂರಿನ 'ಶ್ರೀನಿವಾಸ ಸ್ಕೂಲ್ ಆಫ್ ಆರ್ಕಿಟೆಕ್ಚರ್' ಹಾಗೂ ಮಣಿಪಾಲದ 'ಗಾಂಧಿಯನ್ ಸೆಂಟರ್ ಫಾರ್ ಫಿಲಾಸಫಿಕಲ್ ಆರ್ಟ್ಸ್ ಮತ್ತು ಸೈನ್ಸ್'ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಇವರು, ಉಡುಪಿಯಲ್ಲಿ ಭಾಸ ಗ್ಯಾಲರಿ ಮತ್ತು ಸ್ಟುಡಿಯೊವನ್ನು ನಡೆಸಿಕೊಂಡು ಹತ್ತಾರು ಕಲಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದಾರೆ. ಕರಾವಳಿಯ ಕಲಾವಿದರ ಬಗೆಗೆ 'ಮೊಡೆಪು' ಎಂಬ ಪುಸ್ತಕ ಬರೆದಿದ್ದಾರೆ. ಭಾರತದ ವಿವಿಧ ಭಾಗಗಳ ಹಾಗೂ ರಷ್ಯಾ–ಆಸ್ಟ್ರೇಲಿಯಾಗಳಲ್ಲಿನ ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಮಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ತೆಲಂಗಾಣದ ಸಿ.ಸಿ.ಟಿ., ಉಡುಪಿಯ ಜಿಲ್ಲಾಧಿಕಾರಿ ಕಚೇರಿ, ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯ ಮ್ಯೂಸಿಯಂ, ಮುದ್ರಣ ಮ್ಯೂಸಿಯಂ, ಜಿಲ್ಲಾ ಡಿಜಿಟಲ್ ಲೈಬ್ರರಿ ಮೊದಲಾದೆಡೆ ಮತ್ತು ಹಲವಾರು ಖಾಸಗಿ ಸಂಗ್ರಹಕಾರರಲ್ಲಿ ಹಾವಂಜೆ ಅವರ ಕಲಾಕೃತಿಗಳು ಸ್ಥಾನ ಪಡೆದಿವೆ.

ಕಾವಿ ಕಲೆಯ ಜೊತೆಜೊತೆಗೇ ಮಿಶ್ರ ಮಾಧ್ಯಮದ ಕಲಾಕೃತಿಗಳನ್ನೂ ರಚಿಸುವ ಇವರ ಪ್ಲಾಸ್ಟಿಕ್ ಅರಿವು ಜಾಗೃತಿಯ ಮೀನಿನ ಶಿಲ್ಪವು ಇಪ್ಪತ್ತಕ್ಕೂ ಹೆಚ್ಚು ದೇಶಗಳಲ್ಲಿ ಅನಾವರಣಗೊಂಡಿದೆ. ಹಾವಂಜೆಯಲ್ಲಿ ಕೃಷಿಯೊಂದಿಗೆ ಕಲಾ ಪ್ರಯೋಗಗಳಲ್ಲಿ ನಿರತರಾಗಿರುವ ಇವರು, ಕಾವಿ ಕಲೆ ಸಂರಕ್ಷಣಾ ಕಾರ್ಯ ಹಾಗೂ ಉಳಿವಿಗಾಗಿ ಪ್ರಯತ್ನಿಸುತ್ತಿದ್ದಾರೆ.

ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿರುವ ಚಿತ್ರಕಲಾ ಪರಿಷತ್ತಿನಲ್ಲಿ ಕಾವಿ ಕಲಾಶೈಲಿಯನ್ನು ಬಳಸಿಕೊಂಡು ಹಾವಂಜೆ ಅವರು ರಚಿಸಿರುವ ಕಲಾಕೃತಿಗಳ ಪ್ರದರ್ಶನ ನ. 9ರಿಂದ 17ರವರೆಗೆ ನಡೆಯಲಿದೆ. 'ಕಾವಿ ಕೆಲಿಡೋಸ್ಕೋಪ್' ಶೀರ್ಷಿಕೆಯ ಈ ಪ್ರದರ್ಶನದಲ್ಲಿ – ಪುರಾಣ ಪ್ರತಿಮೆಗಳೊಂದಿಗೆ ಕಾವಿ ಕಲೆಯಲ್ಲಿ ಅಡಕವಾಗಿರುವ ಮಂಡಲ ವಿನ್ಯಾಸಗಳು, ತಾಂತ್ರಿಕ ಪ್ರಯೋಗಗಳು ಸೇರಿದಂತೆ ಹಲವಾರು ವಿನ್ಯಾಸಪೂರ್ಣ ಸಂಯೋಜನೆಗಳ ಕಲಾಕೃತಿಗಳನ್ನು ನೋಡಬಹುದು. ಸಾಂಪ್ರದಾಯಿಕವಾಗಿ ಸುಣ್ಣ ಮತ್ತು ಮಣ್ಣಿನ ಹದಗೊಳಿಸಿದ ಗಾರೆಯ ಮೇಲೆ ಗೀರಿ ಮಾಡಿರುವ ರಚನೆಗಳು, ಹಾವಂಜೆಯವರು ಸ್ವತಃ ನವೀನ ಮಾಧ್ಯಮದಲ್ಲಿ ಅಭಿವೃದ್ಧಿಪಡಿಸಿರುವ ಸುಣ್ಣದ ಬ್ಲಾಕ್ ಮೇಲೆ ನುಣುಪಾದ ಮಣ್ಣಿನ ಲೇಪನವನ್ನು ಹಚ್ಚಿಕೊಳ್ಳುತ್ತಾ ಅದರ ಮೇಲೆ ರಚಿಸಿರುವ ಕಲಾಕೃತಿಗಳು, ಕೆಮ್ಮಣ್ಣಿನೊಂದಿಗೆ ನೈಸರ್ಗಿಕ ಪಂಚವರ್ಣಗಳನ್ನು ಬಳಸಿಕೊಂಡು ರಚಿಸಿರುವ ಕಲಾಕೃತಿಗಳು ಪ್ರದರ್ಶನದಲ್ಲಿವೆ.

ಪ್ರತಿಕ್ರಿಯಿಸಿ: **feedback@sudha.co.in**